ನಿವೇದನೆ

# ಬೆಳಕಾಗಲಿ ವಿವೇಕ, ಶಬ್ದಕ್ಕೆ ದಕ್ಕಲಿ ಲಜ್ಜೆ

ಬೆಳಕಿನ ಬಗ್ಗೆ ಸಂಭ್ರಮಿಸುವ ನಾವು, ಬೆಳಕನ್ನೇ ಕಾಣದ ಜೀವಗಳ ಕುರಿತು ಯೋಚಿಸಲು ದೀಪಾವಳಿ ನೆಪವಾಗಬೇಕು. ಈ ಚಿಂತನೆ ನೇತ್ರದಾನದ ಅಗತ್ಯದ ಬಗ್ಗೆ ನಮ್ಮಲ್ಲಿ ತಿಳಿವು ಮೂಡಿಸುವಂತಾದರೆ, ಅದಕ್ಕೂ ಮಿಗಿಲಾದ ಹಬ್ಬವುಂಟೆ?

ದೀಪಾವಳಿ ಬೆಳಕನ್ನು ಸಂಭ್ರಮಿಸುವ ಹಬ್ಬ. ಹಣತೆಗಳು ಚೆಲ್ಲುವ ಬೆಳಕಿನೊಂದಿಗೆ, ಸಿಡಿಮದ್ದುಗಳ ಚಿತ್ತಾರದ ಬೆಳಕೂ ಸೇರಿಕೊಂಡು ದೀಪಾವಳಿ ಸಂಭ್ರಮದಲ್ಲಿ ಬೆಳಕಿನ ಹೊನಲೇ ಸೃಷ್ಟಿಯಾಗುತ್ತದೆ. ಹಬ್ಬದ ಸಂಭ್ರಮದ ಭಾಗವಾಗಿ ಪಟಾಕಿಗಳನ್ನು ಸಿಡಿಸುವುದರಿಂದಾಗಿ ಬೆಳಕಿನೊಂದಿಗೆ ಶಬ್ದವೂ ಜೊತೆಯಾಗುತ್ತದೆ. ದೀಪಾವಳಿಯ ಬೆಳಕು ಜ್ಞಾನದ ಸಂಕೇತ. ಬೆಳಕಿನ ಮೂಲಕ ಅಂಧಕಾರವನ್ನು ಹೋಗಲಾಡಿಸುವುದು ಹಬ್ಬದ ಆಶಯ. ಆದರೆ, ಬಹುತೇಕ ಸಂದರ್ಭಗಳಲ್ಲಿ ರೂಢಿಗತ ಆಚರಣೆಗಷ್ಟೇ ಹಬ್ಬಗಳು ಸೀಮಿತಗೊಳ್ಳುತ್ತವೆ; ಹಬ್ಬಗಳ ಹಿಂದಿನ ಉದಾತ್ತ ಆಶಯಗಳು ಹಿನ್ನೆಲೆಯಲ್ಲಿಯೇ ಉಳಿಯುತ್ತವೆ. ದೀಪಾವಳಿ ಹಬ್ಬದ ಉದಾಹರಣೆಯನ್ನೇ ನೋಡಿ: ಹಬ್ಬದ ಬೆಳಕಿನ ಸಂಭ್ರಮ ಸೌಂದರ್ಯಪ್ರಜ್ಞೆಯ ಹಿನ್ನೆಲೆಯಲ್ಲಿ ನಡೆಯುವುದೇ ಹೆಚ್ಚು. ಅಂಗಳ ಹಾಗೂ ಬಯಲಿನಲ್ಲಿ ಹಚ್ಚುವ ಹಣತೆಯ ಬೆಳಕು ಅಂತರಂಗವನ್ನೂ ಬೆಳಗಿದಾಗಷ್ಟೇ ಹಬ್ಬದ ಆಚರಣೆ ಸಂಪ್ರದಾಯದ ನೆಲೆಗಟ್ಟಿನಿಂದ ಸಾರ್ಥಕತೆಯನ್ನು ಪಡೆಯುವುದು.

ಸಾಂಪ್ರದಾಯಿಕ ಆಚರಣೆಗಷ್ಟೇ ಸೀಮಿತವಾದರೆ ಹಬ್ಬವೊಂದು ಯಾಂತ್ರಿಕವಾಗಿಬಿಡುತ್ತದೆ. ಸಮಕಾಲೀನ ಅಗತ್ಯಗಳಿಗೆ ಸ್ಪಂದಿಸುತ್ತ, ಚಿಂತನೆ ಮತ್ತು ಆಚರಣೆ ಸೃಜನಶೀಲಗೊಂಡಾಗ ಹಬ್ಬದ ಜೀವಂತಿಕೆಯೂ ಹೆಚ್ಚುವುದು. ಈ ಹಿನ್ನೆಲೆಯಲ್ಲಿ, ಭಾರತದಲ್ಲಿ ಮಾತ್ರವಲ್ಲದೆ, ವಿಶ್ವದ ಬೇರೆ ಬೇರೆ ಭಾಗಗಳಲ್ಲಿ ಬೆಳಕಿನ ಕೊಯಿಲಿನ ರೂಪದಲ್ಲಿ ಆಚರಣೆಗೊಳ್ಳುವ ದೀಪಾವಳಿ ಹಬ್ಬವನ್ನು ಸೃಜನಶೀಲಗೊಳಿಸುವ ಪ್ರಯತ್ನಗಳು ಇತ್ತೀಚಿನ ವರ್ಷಗಳಲ್ಲಿ ನಡೆಯುತ್ತಿರುವುದನ್ನು ಗಮನಿಸಬೇಕು. ಸಮಾಜ ಹಾಗೂ ಪರಿಸರ ಕಾಳಜಿಯ ನೆಲೆಗಟ್ಟಿನಲ್ಲಿ ದೀಪಾವಳಿ ಆಚರಿಸುವ ಮನೋಭಾವ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಇದರ ಫಲವಾಗಿಯೇ, ಹಸುರು ಪಟಾಕಿಗಳು ರೂಪುಗೊಂಡಿವೆ. ಪಟಾಕಿಯಿಂದ ದೂರವಿರುವವರ ಸಂಖ್ಯೆಯೂ ಹೆಚ್ಚಾಗುತ್ತಿದೆ.

ದೀಪಾವಳಿಯ ಬೆಳಕಿನ ರೂಪಕವನ್ನು ಸಮಾಜದ ಹಿತಚಿಂತನೆಗಾಗಿ ಬಳಸಿಕೊಳ್ಳುವ ಮೂಲಕ ದೀಪಾವಳಿ ಹಬ್ಬದ ಸಂಭ್ರಮವನ್ನು ಹೆಚ್ಚಿಸಿಕೊಳ್ಳುವ ಸಾಧ್ಯತೆಗಳ ಕುರಿತು ನಾವು ಪ್ರಜ್ಞಾಪೂರ್ವಕವಾಗಿ ಯೋಚಿಸಬೇಕಾಗಿದೆ. ಬೆಳಕಿನ ಬಗ್ಗೆ ಸಂಭ್ರಮಿಸುವ ನಾವು, ಬೆಳಕನ್ನೇ ಕಾಣದ ಜೀವಗಳ ಕುರಿತು ಯೋಚಿಸಲು ದೀಪಾವಳಿ ನೆಪವಾಗಬೇಕು. ಈ ಚಿಂತನೆ ನೇತ್ರದಾನದ ಅಗತ್ಯದ ಬಗ್ಗೆ ನಮ್ಮಲ್ಲಿ ತಿಳಿವು ಮೂಡಿಸುವಂತಾದರೆ, ಅದಕ್ಕೂ ಮಿಗಿಲಾದ ಹಬ್ಬವುಂಟೆ?

ಭಾರತದಲ್ಲಿ ಒಂದು ಕೋಟಿ ದೃಷ್ಟಿಹೀನರಿದ್ದಾರೆ ಎನ್ನುವ ಅಂದಾಜಿದೆ. ಅವರಲ್ಲಿ, ಸುಮಾರು 10 ಲಕ್ಷ ಮಂದಿ ಕಾರ್ನಿಯಾ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಹೀಗೆ ಕಾರ್ನಿಯಾ ದೋಷದಿಂದ ಬಳಲುತ್ತಿರುವವರಲ್ಲಿ, ಶೇ. 60ಕ್ಕಿಂತಲೂ ಹೆಚ್ಚು ಅಂಧರು 12 ವರ್ಷಕ್ಕೂ ಕಡಿಮೆ ವಯಸ್ಸಿನವರು. ಕಾರ್ನಿಯಾ ಬದಲಾವಣೆಯಿಂದ ಮಾತ್ರ ಇವರ ದೃಷ್ಟಿದೋಷವನ್ನು ಬಗೆಹರಿಸಬಹುದಾಗಿದೆ. ದುರದೃಷ್ಟವಶಾತ್, ಇವರಿಗೆ ಅಗತ್ಯವಾದಷ್ಟು ಸಂಖ್ಯೆಯ ಕಾರ್ನಿಯಾ ದಾನಿಗಳಿಂದ ದೊರೆಯುತ್ತಿಲ್ಲ. ನೇತ್ರದಾನದ ಬಗೆಗಿರುವ ಭಯ, ಪೂರ್ವಗ್ರಹಗಳಿಂದಾಗಿ ವ್ಯಕ್ತಿಯ ಸಾವಿನೊಂದಿಗೆ ಅವರ ಅಮೂಲ್ಯ ಕಣ್ಣುಗಳೂ ಮಣ್ಣಾಗುತ್ತಿವೆ. ದೃಷ್ಟಿಯ ಹಂಬಲದಲ್ಲಿರುವ ನಾಲ್ವರಲ್ಲಿ ಒಬ್ಬರಿಗಷ್ಟೇ ದಾನಿಗಳ ಮೂಲಕ ಕಾರ್ನಿಯಾ ಲಭ್ಯವಾಗುತ್ತಿದೆ. ಉಳಿದವರ ಆಯಸ್ಸು ನಿರೀಕ್ಷೆಯಲ್ಲಿ ಸವೆಯುತ್ತಿದೆ. ಅವರಿಗೆಲ್ಲ ದೀಪಾವಳಿ ಸಂಭ್ರಮ ಬೇಡವೆ?

ಭಾರತಕ್ಕೆ ಹೋಲಿಸಿದರೆ ನೆರೆಯ ಶ್ರೀಲಂಕಾ ನೇತ್ರದಾನದಲ್ಲಿ ಮುಂದಿದೆ. ವಿಶ್ವದಲ್ಲೇ ಅತ್ಯಂತ ಹೆಚ್ಚಿನ ಸಂಖ್ಯೆಯ ನೇತ್ರದಾನಿಗಳು ಶ್ರೀಲಂಕಾದಲ್ಲಿದ್ದಾರೆ. ಅಲ್ಲಿನ ಬಹುಸಂಖ್ಯಾತರು ಬೌದ್ಧ ಧರ್ಮದ ಅನುಯಾಯಿಗಳು. ಬೌದ್ಧ ಧರ್ಮದಲ್ಲಿ ‘ದಾನ’ಕ್ಕೆ ವಿಶೇಷ ಮಹತ್ವವಿರುವುದರಿಂದ ಲಂಕನ್ನರಲ್ಲಿ ನೇತ್ರದಾನ ಅತ್ಯಂತ ಸಹಜ ಎನ್ನುವಂತಾಗಿದೆ. ಬುದ್ಧನನ್ನು ಪ್ರೀತಿಸುವ ಅನುಸರಿಸುವ ಭಾರತೀಯರೂ ನೇತ್ರದಾನದ ಮಹತ್ವ ಅರಿಯಬೇಕಾಗಿದೆ. ದೇಶದಲ್ಲಿ ಪ್ರತಿ ನಿಮಿಷಕ್ಕೆ ಸರಾಸರಿ ಇಪ್ಪತ್ತು ಮಂದಿ ಸಾವಿಗೀಡಾಗುತ್ತಿದ್ದಾರೆ ಎಂದು ಭಾವಿಸಿದರೂ, ನಲವತ್ತು ಕಣ್ಣುಗಳು ಮಣ್ಣುಪಾಲಾಗುತ್ತಿವೆ ಎಂದರ್ಥ. ಸಾವನ್ನು ಮುಂದೂಡಲಿಕ್ಕಾಗಿ ನಿರಂತರ ಪ್ರಯತ್ನಪಡುವ ನಾವು, ಆ ಪ್ರಯತ್ನದ ಭಾಗವಾಗಿಯಾದರೂ ನೇತ್ರದಾನಿಗಳಾಗಬೇಕಿದೆ.

ಬೆಳಕಿನೊಂದಿಗೆ ಶಬ್ದದ ಕುರಿತೂ ಯೋಚಿಸಲು ದೀಪಾವಳಿ ಸೂಕ್ತ ಸಂದರ್ಭ. ಮಕ್ಕಳು, ಹಿರಿಯ ನಾಗರಿಕರು ಮತ್ತು ಪರಿಸರದ ಮೇಲೆ ಪಟಾಕಿಯ ಶಬ್ದ ಉಂಟುಮಾಡುವ ದುಷ್ಪರಿಣಾಮದ ಬಗ್ಗೆ ದೀಪಾವಳಿ ಸಂದರ್ಭದಲ್ಲಿ ಆತಂಕ ವ್ಯಕ್ತವಾಗುತ್ತಿದೆ. ಇದಕ್ಕಿಂತಲೂ ಮಿಗಿಲಾದ ಕಳವಳವನ್ನು ಮಾತಿನ ಮಾಲಿನ್ಯ ನಮ್ಮಲ್ಲಿ ಹುಟ್ಟಿಸಬೇಕಾಗಿದೆ. ಮಾತು ತನ್ನ ಧ್ವನಿಶಕ್ತಿ ಹಾಗೂ ಆರ್ದ್ರತೆ ಕಳೆದುಕೊಳ್ಳುತ್ತ, ಸದ್ದುಗದ್ದಲದ ರೂಪ ಪಡೆದುಕೊಳ್ಳುತ್ತಿರುವ ಸಂದರ್ಭವಿದು. ವರ್ತಮಾನದ ಅನೇಕ ಬಿಕ್ಕಟ್ಟುಗಳಿಗೆ ಮಾತಿನ ಜೀವಶಕ್ತಿ ನಷ್ಟಗೊಂಡಿರುವುದು, ಅದು ಒಡಕು ಶಬ್ದದ ರೂಪದಲ್ಲಷ್ಟೇ ಚಲಾವಣೆಯಲ್ಲಿರುವುದು ಪ್ರಮುಖ ಕಾರಣವಾಗಿದೆ. ಮಾತು ಒಜ್ಜೆ ಮತ್ತು ಲಜ್ಜೆ ಕಳೆದುಕೊಂಡರೆ, ವ್ಯಕ್ತಿ ಹಾಗೂ ಸಮಷ್ಟಿಯ ಬದುಕಿನ ಸೌಂದರ್ಯ ಗಾಸಿಗೊಳ್ಳುವುದು. ಬೆಳಕಿಗೆ ವಿವೇಕದ ಸ್ಪರ್ಶ, ಮಾತಿಗೆ ಲಜ್ಜೆಯ ಆವರಣ – ಇದು ಈ ದೀಪಾವಳಿಯ ಆಶಯವಾಗಲಿ.

■ ರಘುನಾಥ ಚ.ಹ.

